೧. ನಂಜನಗೂಡು ತಾಲ್ಲೂಕಿನ ವಿಶ್ವ ಬ್ಯಾಂಕ್ ನೆರವಿನ ಕುದ್ರಿಗುಂಡಿ ಹಳ್ಳ ಕೆರೆ ನೀರಾವರಿ ಯೋಜನೆಯ ೨೫೪ ಲಕ್ಷ ರೂಪಾಯಿಗಳ ಯೋಜನಾ ವರದಿಗೆ ಜುಲೈ ೧೯೮೩ರಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಈ ಯೋಜನೆಯಿಂದ ೮೧೬ ಹೆಕ್ಟೇರುಗಳ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ. ಈ ಯೋಜನೆಯ ಅಣೆಕಟ್ಟು ಕಾಮಗಾರಿಗಳನ್ನು ಗುತ್ತಿಗೆದಾರರಾದ ಮೆಸರ್ಸ ಕನ್ಸಾಲಿಡೇಟೆಡ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ ಇವರಿಗೆ ಎಲ್.ಸಿ.ಬಿ. ಮಾದರಿಯ ಆಧಾರದ ಮೇಲೆ ೧೯೮೩-೮೪ರಲ್ಲಿ ವಹಿಸಲಾಗಿದೆ. ಮಾರ್ಚ ೧೯೯೦ರವರೆಗೆ ಈ ಯೋಜನೆಗೆ ಒಟ್ಟು ೪೨೮ ಲಕ್ಷ ರೂಪಾಯಿಗಳು ವೆಚ್ಚವಾಗಿದೆ. ಅಣೆಕಟ್ಟಿನ ಕಾಮಗಾರಿಗಳು ಮುಗಿದಿದ್ದು ಕಾಲುವೆ ಕೆಲಸಗಳು ನಿರ್ಮಾಣದಲ್ಲಿದೆ.

೨. ಈ ಯೋಜನೆಯಿಂದ ಮುಳುಗಡೆಯಾಗುವ ಜನರಲ್ಲಿ ಶೇಖಡ ೭೫ರಷ್ಟು ಜನರಿಗೆ ಈಗಾಗಲೇ ಪರಿಹಾರಧನ ನೀಡಲಾಗಿದೆ. ಪರಿಹಾರಧನವನ್ನು ನೀಡುವಲ್ಲಿ ಆದ ವಿಳಂಬಕ್ಕೆ ಮುಖ್ಯ ಕಾರಣವೇನೆಂದರೆ ಅವರುಗಳಿಗೆ ಸಾಗುವಳಿಗಾಗಿ ನಿಗದಿಪಡಿಸಲಾದ ಸರ್ವೆ ನಂಬರ್‌ಗಳಿಗೆ ಬದಲಾಗಿ ಅವರು ಗಳು ಬೇರೆಯೇ ಸರ್ವೆ ನಂಬರ್‌ಗಳಲ್ಲಿ ಸಾಗುವಳಿ ಮಾಡುತ್ತಿದ್ದರು. ಇದನ್ನು ಸರಿಪಡಿಸುವ ಸಲುವಾಗಿ ತಹಶೀಲ್ದಾರರ ಗಮನಕ್ಕೆ ಈ ವಿಷಯವನ್ನು ತರಲಾಗಿದೆ.

೩. ಕಾಮಗಾರಿಗಳನ್ನು ಬಹಳ ಎಚ್ಚರಿಕೆಯ ಮೇಲುಸ್ತುವಾರಿ ಮತ್ತು ಗುಣ ನಿಯಂತ್ರಕ್ಕೆ ಒಳಪಟ್ಟು ಮಾಡಲ್ಪಟ್ಟು ಮೇಲಧಿಕಾರಿಗಳಿಂದ ಆಗಿಂದಾಗ್ಗೆ ಸ್ಥಳ ಪರೀಕ್ಷೆ ಮಾಡಲ್ಪಟ್ಟಿವೆ. ತೃಪ್ತಿ ಕರವಲ್ಲದ ಕಾಮಗಾರಿಗಳು ಕಂಡು ಬಂದ ತಕ್ಷಣವೇ ಅವುಗಳನ್ನು ಸರಿಪಡಿಸುವಲ್ಲಿ ಸೂಕ್ತಕ್ರಮವನ್ನು ಆಗಾಗ್ಗೆ ತೆಗೆದಂಕೊಳ್ಳಲಾಗಿದೆ. ಈ ಸಂಬಂಧದಲ್ಲಿ ನಿರ್ದಿಷ್ಟ ಹಾಗೂ ನಿಖರವಾದ ದೂರುಗಳು ಬಂದಲ್ಲಿ ಸೂಕ ವಾದ ತನಿಖೆ ನಡೆಸಲಾಗುವುದು.

(iii) ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಪ್ರೌಢ ಶಾಲೆಗಳಿಗೆ ಸರ್ಕಾರದ ಮಂಜೂರಾತಿ

ಶ್ರೀ ಎ. ಬಸವರಾಜ್.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಹೈಸ್ಕೂಲುಂ ಗಳಿಗೆ ಸರ್ಕಾರ ಇನ್ನೂ ಮಂಜೂರಾತಿ ನೀಡಿಲ್ಲ. ಯಾವುದೋ ಪ್ರೌಢ ಶಾಲೆಯಿಂದ ಪ್ರತಿನಿಯುಕ್ತಿ ಹೊಂದಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಬಿಟ್ಟರೆ ಬೇರೆ ಶಿಕ್ಷಕರ ಮಂಜೂರಾತಿ ಯಾಗಿಲ್ಲ, ಅರೆಕಾಲಿಕ ಅಧ್ಯಾಪಕರ ನೆರವಿನಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಮುಂದಿನ ವರ್ಷಾರ್ಥಿಂಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದೆ. ಮಂಜೂರಾತಿ ನೀಡದಿದ್ದಲ್ಲಿ ಮಾನ್ಯತೆ ದೊರಕದೆ ಸಹಸ್ರಾರು ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾಯಮಾನವಾಗುತ್ತದೆ. ಆದ್ದರಿಂದ ಈ ವಿಚಾರವನ್ನು ತಕ್ಷಣ ಪರಿಶೀಲಿಸಿ ಶೀಘ್ರ ಮಂಜೂರಾತಿ ನೀಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ಜಿಲ್ಲಾ ಪರಿಷತ್ತುಗಳು ಪ್ರೌಢ ಶಾಲೆಗಳನ್ನು ತೆರೆಯುವ ಬಗ್ಗೆ ಸರ್ಕಾರದಿಂದ ದಿನಾಂಕ ೧೨-೯-೧೯೯೯ ರಂದು ಮಾರ್ಗದರ್ಶನಗಳನ್ನು ನೀಡಿದೆ. ಮತ್ತು ಸರ್ಕಾರಿ ಸುತ್ತೋಲೆ ದಿನಾಂಕ ೨೫-೫-೯೦ರಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಹೇಗೆ ಕಳುಹಿಸಬೇಕೆಂದು ತಿಳಿಸಲಾಗಿದೆ; ಈ ಮಾರ್ಗದರ್ಶನಗಳನ್ನು ಹಾಗೂ ಸುತ್ತೋಲೆ ಪ್ರಕಾರ ಇಲ್ಲದ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಲು ಜಿಲ್ಲಾ ಪರಿಷತ್ತುಗಳಿಗೆ ಹಿಂದಕ್ಕೆ ಕಳುಹಿಸಲಾಗಿದೆ.

ಹೊಸ ಸರ್ಕಾರಿ ಹಾಗೂ ಖಾಸಗೀ ಪ್ರೌಢ ಶಾಲೆಗಳನ್ನು ಜಿಲ್ಲಾ ಪರಿಷತ್ತುಗಳು ತೆರೆಯುವ ಬಗ್ಗೆ ಸಧ್ಯದಲ್ಲೇ ಒಂದು ಸಭೆಯನ್ನು ಕರೆದು ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು, ೨೮-೨-೯೯ಕ್ಕೆ ಎಲ್ಲಾ ಅಧ್ಯಕ್ಷರುಗಳ ಸಭೆ ಕರೆದಿದ್ದೇನೆ. ತದನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ.

iv ಖಾನಾಪುರ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ ದರೋಡೆಕೋರರ ಹಾವಳಿ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಬಾಗೇವಾಡಿ, ಬಡಸಾ, ಖಾನಾಪೂರ ತಾಲ್ಲೂಕಿನ ಪಾರಿಶ್ವಾಡ ಚಿಕ್ಕಹಟ್ಟಿ ಹೂಳಿ ಮತ್ತು ಬೈಲಹೊಂಗಲ ತಾಲ್ಲೂಕಿನ ಗಿರಿಯಾಳ ಗ್ರಾಮಗಳಲ್ಲಿ ದರೋಡೆ ಗ್ಯಾಂಗುಗಳ ಹಾವಳಿ ಹೆಚ್ಚಾಗಿದೆ.